# ಕ್ಷೀರ–ಸಾಗರಕೆ ಶ್ರೀರಮಣ ಬಂದಂತೆ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 143.
2. **Ref.:** Samagra Dasa Sahitya, Samputa 4, published by Kannada & Culture Dept, Govt of Karnataka, Bengaluru, page No. 10.
3. **Note:** This song is not available in the books of Shri Sri. Pavanje Guru Rao and also in the book of Prof. S.K. Ramachandra Rao and also in the books of and also in the books of Gorebala Hanumantha Rayaru.

ಕ್ಷೀರ–ಸಾಗರಕೆ ಶ್ರೀರಮಣ ಬಂದಂತೆ

ಪ್ರಹ್ಲಾದನಿಗೊಲಿದು ನರಸಿಂಹ ಬಂದಂತೆ

ಭಗೀರಥನ ಮನೆಗೆ ಶ್ರೀಗಂಗೆ ಬಂದಂತೆ

ಮುಚುಕುಂದನ ಮನೆಗೆ ಮುಕುಂದ ಬಂದಂತೆ

ವಿದುರನ ಮನೆಗೆ ಶ್ರೀ ಕೃಷ್ಣ ಬಂದಂತೆ

ಲಕ್ಷ್ಮೀಕಾಂತ ಪುರಂದರ ವಿಠಲ ಬರಲು, ನನ್ನ

ನಾಲಗೆ ತುದಿಯಲಿ ಗಾಯನ ಮಾಡುತ ಧನ್ಯನಾದೆ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಮುಚುಕುಂದ : -** ಸೂರ್ಯ ವಂಶದ ಮಾಂಧಾತ ಮತ್ತು ಬಿಂದುಮತಿ ಇವರ ಮಗ. ದೇವ-ದಾನವರ ಯುದ್ಧದಲ್ಲಿ ದೇವತೆಗಳಿಗೆ ನೆರವಾದುದರಿಂದ, ಅವರು ವಾರ ಬೇಡೆನಲು ' ನನಗೆ ನಿದ್ರೆಬೇಕಾಗಿದೆ. ಹಾಗು ನಿದ್ರೆಯಿಂದ ಎದ್ದಾಗ ನನ್ನ ಕಣ್ಣಿಗೆ ಮೊದಲು ಕಂಡವನು ಸುತ್ತು ಬೂದಿಯಾಗಲಿ; ಅಲ್ಲದೆ ಶ್ರೀಹರಿಯು ನನ್ನನ್ನು ಅನುಗ್ರಹಿಸಲಿ ' ಎಂದು ಬೇಡಿಕೊಂಡನು. ಇವನು ಒಂದು ಗವಿಯಲ್ಲಿ ಮಲಗಿದ್ದ. ಕೃಷ್ಣನು

ಕಾಲಯವನನನ್ನು ಉಪಾಯದಿಂದ ಈ ಗವಿಯಲ್ಲಿ ಹೊಗಿಸಿ, ಮುಚುಕುಂದನಿಂದ ಕೊಲ್ಲಿಸಿದನು.

(ಭಾಗವತ ೧೦/೫೧)

**ವಿ.ಸೂ.:-** ಇದೊಂದು ಮಾಲೋಪಮೆಗೆ ಉತ್ತಮವಾದ ಉದಾಹರಣೆ.

**Classification:** Ugabhoga
**Ankita:** purandara vittala
**Location:** NA
**Category:** Pooja Tatva
**Sub-Category:** halu, Samudra, Narayana, prahallada, Narasimha, bhagiratha, gange, mane, muchukunda, mukunda, vidura, Krishna, nalige, dhanya,
**Pravachana:** NA
**Explanation:** NA